International Journal of Kannada Research 2016; 2(3): 130-134

International Journal of Kannada Research
www.kannadajournal.com

**ISSN: 2454–5813**
IJSR 2016; 2(3): 130-134
© 2016 IJKS
www.kannadajournal.com
Received: 17-04-2016
Accepted: 18-05-2016

**Dr. Kavyashree G**
Assistant Professor
Government First Grade College
for Women, Davangere,
Karnataka, India.

# ಚಂದ್ರಕಾಂತ ಕುಸನೂರರ ಅಸಂಗತ ನಾಟಕಗಳು

## Dr. Kavyashree G

ಚಂದ್ರಕಾಂತ ಕುಸನೂರರು ಕವಿ ಮಾತ್ರವಲ್ಲ, ಸಾಹಿತಿ, ಚಿತ್ರಕಲೆಗಾರ, ನಾಟಕಕಾರ ಮತ್ತು ಕಾದಂಬರಿಕಾರ. ಹೀಗೆ ಇವರದ್ದು ಒಂದು ಅಖಂಡ ಅನನ್ಯ ವ್ಯಕ್ತಿತ್ವ. ಆಂಗ್ಲ ಸೂಕ್ತಿಯಂತೆ Live is short bur art is long ಎಂಬುದು ಕಲಾ ಜಗತ್ತಿಗೆ ದಿಟ. ಕೃತಿ ರೂಪದಲ್ಲಿ ಸಾಹಿತಿಯು ಜನಮಾನಸದಲ್ಲಿ ಚಿರಂಜೀವಿಯಾಗುತ್ತಾನೆ. ಕುಸನೂರರ ಬದುಕಿನ ಬಯಲ ಮೇಲೊಂದು ಹಕ್ಕಿನೋಟವನ್ನು ಹಾಯಿಸುತ್ತ ಅವರ ಬರವಣಿಗೆಯ ತೂಕವನ್ನು ಹೊಕ್ಕು ಅಲ್ಲಿರುವ ಹೂ ಹಣ್ಣುಗಳ ಸೊಗಸನ್ನು ಅದರ ಸವಿಯನ್ನು ಮನಗಾಣಿಸುವ ಒಂದು ಯತ್ನ ಇಲ್ಲಿ ಮಾಡಲಾಗಿದೆ.

ಹಲವಾರು ಕೃತಿಗಳ ಸಮ್ಮಿಳನವಾಗಿ ಎಂತಹವರನ್ನೂ ಆನಂದಗೊಳಿಸುವ ಏಕಮಾತ್ರ ಕಲೆಯೆಂದರೆ, ನಾಟಕವೇ ಸರಿ. ಅಂತೆಯೇ 'ನಾಟ್ಯಂ ಭಿನ್ನರುಚೇಜನಕಸ್ಯ ಬಹುಧಾಪ್ಯೇಕಂ ಸಮಾರಾಧನಂ' ಎಂಬ ಹೇಳಿಕೆ ಜನಜನಿತವಾಗಿದೆ. ನಾಟಕವೆಂದರೆ ಭಾಷೆಯ ಮೂಲಕವಾಗಿಯೇ ನಡೆಯಬೇಕಾದ ಸೃಜನಕ್ರಿಯೆ.

'ಕಾವ್ಯೇಷು ನಾಟಕಂ ರಮ್ಯಂ' ಎಂಬ ಲಾಕ್ಷಣಿಕರ ಹೇಳಿಕೆಯಂತೆ ಕಾವ್ಯದೊಳಗೆ ದೃಶ್ಯಕಾವ್ಯವಾದ ನಾಟಕಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಇಂಥ ನಾಟಕಕ್ಕೆ ತನ್ನದೇ ಒಂದು ಸಂವಿಧಾನವಿದೆ. ಪ್ರೇಕ್ಷಕರು ಇದಕ್ಕನುಗುಣವಾಗಿಯೇ ನಾಟಕ ನೋಡಬಯಸುತ್ತಾರೆ. ಇದರಲ್ಲಿ ಕೊಂಚವೂ ವ್ಯತ್ಯಾಸ ಕಂಡರೆ ಇದು ನಾಟಕವೇ? ಎಂಬಂಥ ಮಾತುಗಳು ಬರುತ್ತವೆ. ಇದೊಂದು ರೂಢಿಗತ ನಂಬಿಕೆಗಳಿಂದ ಬರುವುದು ಸಹಜ. ಸಾಮಾನ್ಯವಾಗಿ ಜಾನಪದ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಪ್ರಕಾರದ ನಾಟಕಗಳನ್ನು ನೋಡಿದ ಜನಕ್ಕೆ ಬೇರೆ ಪದ್ಧತಿಯ ನಾಟಕಗಳನ್ನು ನೋಡುವ ಅಭ್ಯಾಸವಿರದು. ಒಂದು ಹೊಸ ರೀತಿಯ ನಾಟಕಗಳನ್ನು ನೋಡುವಾಗ ಅನೇಕ ಸಮಸ್ಯೆಗಳು ಉದ್ಭವಿಸುವುದು. ಹೊಸ ರೀತಿಯ ಸಂವೇದನೆ, ಹೊಸ ರೀತಿಯ ಅಭಿವ್ಯಕ್ತಿ, ಹೊಸದಾದ ಅರ್ಥೈಸುವಿಕೆ ಈ ಎಲ್ಲವುಗಳ ಜೊತೆಗೆ ಹೊಂದಾಣಿಕೆ ಹೇಗೆ ಮಾಡಿಕೊಳ್ಳುವುದು? ಇದೇ ಸಮಸ್ಯೆ ಕನ್ನಡದಲ್ಲಿನ ಅಸಂಗತ ನಾಟಕಗಳ ಬಗ್ಗೆ ಬಂದಿರಬಹುದು. ಇದೊಂದು ಕಾರಣವು ಇರಬಹುದು. ಇಂಥ ಅಸಂಗತ ನಾಟಕಗಳು ಹುಟ್ಟಿಕೊಂಡ ಕೂಡಲೇ ಇದನ್ನು ಬಹಳಷ್ಟು ನಾಟಕಕಾರರು ವಿರೋಧಿಸಿದರು. ಅಸಮಾಧಾನ ವ್ಯಕ್ತಪಡಿಸಿ, ಅವುಗಳ ವಿರುದ್ಧ ಅಪ ಪ್ರಚಾರ ಮಾಡಿದರು. ಹೀಗಾಗಿ ಈ ಪ್ರಕಾರ ಕೇವಲ ಹತ್ತು ವರ್ಷದ ಅವಧಿಯಲ್ಲಿಯೇ ತನ್ನ ಜೀವ ಕಳೆದುಕೊಂಡಿತು.

'ಅಸಂಗತ'ದ ಇಂಗ್ಲೀಷ್ ಶಬ್ದ' Absurd' ಇದು ಅಸಂಗತ ಸಿದ್ಧಾಂತವೆಂದು ಹೇಳಬಹುದು. ಅಸಂಗತ ಶಬ್ದವನ್ನು ಅರ್ಥೈಸಲು ಹೊರಟಾಗ 'Surd' ಎಂದರೆ ಗಣಿತಶಾಸ್ತ್ರದಲ್ಲಿ ಲೆಕ್ಕ ಮಾಡುವ ವಿಧಾನ, 'Absurd'ಎಂದರೆ ಅದಕ್ಕೆ ವಿರೋಧವಾದ 'ಅಸ್ತವ್ಯಸ್ತ'ವೆಂಬ ಅರ್ಥವನ್ನು ಸೂಚಿಸುತ್ತದೆ. ಅದು ಅತಾರ್ಕಿಕ, ಅಸಮಂಜಸ, ಮೇಳವಿಲ್ಲದ್ದು ಎಂದು ನ್ಯಾಯದ ದೃಷ್ಟಿಯಿಂದ ನೋಡಿದಾಗ ಕಂಡುಬರುತ್ತದೆ. ಸಾಹಿತ್ಯ ಸಮಕಾಲೀನ ಸಮಾಜದ ಕನ್ನಡಿ, ಮನುಜನಲ್ಲಾದ ಬದಲಾವಣೆಗಳು ಸಮಕಾಲೀನ ಸಾಹಿತ್ಯದ ಮೇಲೆಯೂ ತಮ್ಮ ಪ್ರಭಾವ ಬೀರಿ, ಅಸಂಗತ ಕೃತಿರಚನೆಗೆ ಪ್ರೇರೇಪಿಸಿದವು.

ಈ ನಾಟಕಗಳಿಗೆ ಒಂದು ಕಥಾವಸ್ತುವಿರುವುದಿಲ್ಲ, ತನ್ನದೇ ಆದ ಗುಣಲಕ್ಷಣಗಳಿರುವ ಪಾತ್ರಗಳಿರುವುದಿಲ್ಲ. ನಾಟಕಕ್ಕೆ ಆದಿ–ಅಂತ್ಯವಿರದು. ನೀತಿ ಬೋಧನೆ, ಸಮಸ್ಯೆ ಪರಿಹಾರ, ಉದ್ದೇಶ ಇವೆಲ್ಲ ಇರದೆ, ಹಿಂಸೆ, ಭ್ರಮೆ, ಕನಸು, ಕಾಮ, ಭಯ, ತಾಳ–ಮೇಳವಿಲ್ಲದ ಸಂಭಾಷಣೆ, ಮಾನಸಿಕ ಅಸಮತೋಲನ, ವ್ಯತಿರಿಕ್ತಗಳು ತುಂಬಿಕೊಂಡಿರುತ್ತವೆ. ಇದೊಂದು ಅರ್ಥಹೀನ,

**Correspondence**
**Dr. Kavyashree G**
Assistant Professor
Government First Grade College
for Women, Davangere,
Karnataka, India.

ಉದ್ದೇಶರಹಿತ, ಅಲೌಕಿಕವನ್ನೇ ಸ್ಥಾಯಿಯಾಗಿಟ್ಟು ಕೊಂಡಿರುವುದು. ಇಲ್ಲಿ ಪ್ರೇಕ್ಷಕ ಲೇಖಕನ ಅಪೇಕ್ಷೆಯಂತೆ ಅರ್ಥಗ್ರಹಿಸಬೇಕೆಂದೇನಿಲ್ಲ. ಪ್ರೇಕ್ಷಕ ಸ್ವಾತಂತ್ರ್ಯವನ್ನು ಬಳಸಿಕೊಳ್ಳುತ್ತಾನೆ. ನಾಟಕಕಾರನ ಆಶಯಕ್ಕಿಂತ ಭಿನ್ನವಾದಂಥ ಆಶಯ ಪ್ರೇಕ್ಷಕ, ಸಹೃದಯನದಾಗಿರಬೇಕು. ಹೀಗೆ ಇದರ ಆಶಯದ ಕಂದಕ ಬಹಳ ಆಳ. ಸಾರ್ಥಕ ಬದುಕಿನ ಬಗ್ಗೆ ಅನುಮಾನ, ಅಲೌಕಿಕ ಶಕ್ತಿ ಬಗ್ಗೆ ಸಂದೇಹ, ಜೀವನ ನಿರರ್ಥಕ ಹೋರಾಟ. ಪ್ರೀತಿಯ ಬಗ್ಗೆ ಅನಾಸಕ್ತಿ, ಬದುಕು ಉದ್ದೇಶರಹಿತ, ಹೀಗೆ ಇದೊಂದು ಭೀಕರತೆ ಭಯವನ್ನು ಹುಟ್ಟಸುವಂಥದ್ದು. ಇಂತಹ ವಸ್ತು–ವಿಷಯವೇ ಅಸಂಗತ ನಾಟಕಗಳದು. ಅಸಂಗತ ವಿಷಯಗಳ ವಿವೇಚನೆಗಳ ಬಗ್ಗೆ ಸಮರ್ಥನೆ.

ಈಗಾಗೇ ಹೇಳಿದಂತೆ, ಅಸಂಗತ ನಾಟಕ ಮತ್ತು ಹಾಯಕು ಪ್ರಕಾರಗಳನ್ನು ಹಾಗು ಗಜಲ್‌ನ್ನು ಕನ್ನಡಕ್ಕೆ ತಂದ ಮೊದಲಿಗರು ಕುಸನೂರರು. ಕನ್ನಡದಲ್ಲಿ ಛಂದಸ್ಸನ ನಿಯಮ ಮೀರದೆ ಗಜಲ್ ಸೃಷ್ಟಿ ಕಷ್ಟ ಎಂಬುದು ಇವರ ಅಭಿಪ್ರಾಯ.

ಅಸಂಗತ ನಾಟಕ ಪರಂಪರೆಗೆ ನಾಂದಿ ಹಾಡಿದ ಇವರ ಅಸಂಗತ ನಾಟಕಗಳೆಂದರೆ, 'ಕನಸು' ಪ್ರಜಾವಾಣಿಯ ದೀಪಾವಳಿ ವಿಶೇಷಾಂಕದಲ್ಲಿ (1972–73ರಲ್ಲಿ) ಪ್ರಥಮ ಬಹುಮಾನ ಪಡೆದ ಮೊದಲ ನಾಟಕ. ಮನೆ, ನಾಲ್ಕು ಅಸಂಗತ ನಾಟಕಗಳು, ಈ ಕೃತಿಯಲ್ಲಿ ವಿದೂಷಕ, ಇದಕ್ಕೆ ಸಂಶಯವಿಲ್ಲ. ಅಂಟಿಮಿಂಟಿ ಟಾವಲ ಚಿಂಟಿ, ರತ್ತೋರತ್ತೋರಾಯನ ಮಗಳೆ, ಮೂರು ಅಸಂಗತ ನಾಟಕಗಳು, ರೆಕ್ಕೆ, ಹಳ್ಳಾ ಕೊಳ್ಳಾ ನೀರು, ಈ ಮುಂತಾದವುಗಳು ಅಸಂಗತ ನಾಟಕಗಳಾಗಿವೆ.

ಹೈದ್ರಾಬಾದ್ ಕರ್ನಾಟಕದ ಅಸಂಗತ ನಾಟಕಕಾರರಲ್ಲಿ ಚಂದ್ರಕಾಂತ ಕುಸನೂರರು ಪ್ರಮುಖರು. 'ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ ವೈಪರಿತ್ಯಗಳು ಮತ್ತು ಇಂಗ್ಲಿಷಿನ ಅಯನೆಸ್ಕೊ ಪಿಂಟೊ ಅವರ ಕೃತಿಗಳು ಕುಸನೂರರಿಗೆ ಈ ಕ್ಷೇತ್ರದಲ್ಲಿ ಕಾಲಿರಿಸಲು ಪ್ರೇರೇಪಿಸಿದವು. ಕಾಗೆ ಕೂಟ ಕಂಡ ಮೇಲೇ ಸತ್ತ ಸುದ್ದಿ ಕಳಿಸುವ ಸಂಪ್ರದಾಯದ ಹಿನ್ನೆಲೆಯನ್ನಾಧರಿಸಿದ ಅವರ ಮೊದಲ ಅಸಂಗತ ನಾಟಕ 'ಕನಸು' ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿ ಪ್ರಥಮ ಬಹುಮಾನ ಪಡೆಯಿತು. (1972–1073) ಆಮೇಲೆ ಬರೆದ ನಾಟಕ 'ಮನೆ'. ಆಗಲೇ ಹಲವರು ಈ ಬಗೆಯ ನಾಟಕ ರಚಿಸಿದರೂ 'ಅಸಂಗತ' ಎಂಬ ಹೆಸರು ಬಳಸಿರಲಿಲ್ಲ. ತಮ್ಮ ನಾಟಕಗಳಿಗೆ 'ಅಸಂಗತ' ಎಂಬ ಹೆಸರನ್ನಿಟ್ಟುಕೊಂಡು ಬರೆದವರೆಂದರೆ ಇವರೇ ಮೊದಲಿಗರು.

ನಾಲ್ಕು ಅಸಂಗತ ನಾಟಕಗಳಲ್ಲಿ–'ವಿದೂಷಕ' ಒಂದು. ವ್ಯಕ್ತಿ 1, ವ್ಯಕ್ತಿ 2, ವ್ಯಕ್ತಿ 3, ಇವರು ನಾಟಕದುದ್ದಕ್ಕೂ ಕ್ರೂರನ ಬರುವಿಕೆಗಾಗಿ ಕಾದೂ ಕಾದೂ ಸುಸ್ತಾಗುತ್ತಾರೆ. ಕಾಲಹರಣ ಮಾಡಲು, ವ್ಯಕ್ತಿ 1, ಪಾತ್ರದ ಹೆಸರಿದು, ಬಂಜೆ ರಾಣಿಯ ಕತೆ ಹೇಳುತ್ತದೆ. ವ್ಯಕ್ತಿ 2 ಸಾಯಕ್ಕ ದೇಯಕ್ಕನ ಕಥೆ ಹೇಳುತ್ತದೆ. ಇಂಥ ಮಧ್ಯಕತೆಗಳ ನಡುವೆಯೇ ವಿದೂಷಕ–ಮುದುಕ ಹುಡುಗಿಯ ಪಾತ್ರಗಳ ಪ್ರವೇಶ ಬರುತ್ತದೆ. ಆಕಸ್ಮಿಕವಾಗಿ ರಕ್ತಕಾರಿ ಸತ್ತ ವೃದ್ಧನ ಭೂತದ ಸಲಹೆಯಂತೆ ಅವನ ಮಗಳು ವಿದೂಷಕನ ಜಾಣ್ಮೆಯನ್ನು ಪರೀಕ್ಷೆ ಮಾಡುತ್ತ, 'ಭೂಮಿ ಯಾತರ ಮ್ಯಾಲ ನಿಂತದ?, ಮನುಷ್ಯ ಸತ್ತ ಮ್ಯಾಲ ಎಲ್ಲಿ ಹೋಗ್ತಾನ? ಸೂರ್ಯನ ಹೊಟ್ಯಾಗೇನದ?' ಎಂಬಂಥ ಪ್ರಶ್ನೆಗಳನ್ನು ಕೇಳಿದಾಗ, ವಿದೂಷಕನು ಅದಕ್ಕೆ 'ಭೂಮಿ ಆದಿಶೇಷನ ಮಸ್ತಕದ ಮ್ಯಾಲ ನಿಂತದ. ಸೂರ್ಯನ ಹೊಟ್ಟ್ಯಾಗ ಕತ್ತಲೀ ಅದ, ಮನುಷ್ಯಾ ಸತ್ತ ಮ್ಯಾಲ ತಮ್ಮವ್ವನ ಹೊಟ್ಯಾಗ ಹೋಗ್ತಾನ ಎಂದು ಬುದ್ಧಿವಂತಿಕೆಯಿಂದ ಉತ್ತರಿಸುತ್ತಾನೆ. ಈ ನಾಟಕದಲ್ಲಿ ಸಾವನ್ನು ನಿರೀಕ್ಷಿಸುತ್ತಲೇ ಜೀವಿಸುದರ ಅನಿವಾರ್ಯತೆಯನ್ನು ತೀರಿಸದೆ. ಸಾವು ನಿಶ್ಚತ ಆದರೆ ಅದು ಯಾವಾಗ ಬರುವುದೆಂಬುದು ಅನಿಶ್ಚಿತ. ಸಾವಿನ ನಿರೀಕ್ಷೆಯಲ್ಲಿದ್ದವರಿಗೆ ಜೀವನ ನಿರರ್ಥಕವು ಬೇಜಾರಾಗಿಯೂ, ಬಿಡುವುದು. ಇದನ್ನು ಮರೆಯಿಸಲಿಕ್ಕೆ ವಿದೂಷಕ ತಾನೂ ನಕ್ಕು ಜನರನ್ನು ನಗಿಸುವ ಕಾರ್ಯ ಕೈಗೊಳ್ಳುತ್ತಾನೆ. ಹೀಗೆ ಬದುಕಿನ ಅಸಹಾಯಕತೆಯನ್ನು ಮರೆಯಲೋಸುಗ ಅಸಂಗತ ಸಾಭಾಷಣೆ ಅಥವಾ ಹಾಸ್ಯದಿಂದ ಮರೆಮಾಚಲು ಪ್ರಯತ್ನಿಸುತ್ತಾನೆ ಎನ್ನಬಹುದು. ನಾಟಕವನ್ನು ಕುತೂಹಲಕಾರಿಯಾಗಿ ಬೆಳೆಸಿಕೊಂಡು ಹೋಗುವ ತಂತ್ರ ಚೆನ್ನಾಗಿದೆ. ಕೊನೆವರೆಗೆ ಕುತೂಹಲವನ್ನು ಒಂದೇ ಸಮನೆ ಕೆರಳಿಸುವ ಕಥೆ, ಕಥೆಯೊಳಗಣ ಕಥೆ. ಕೌಶಲ್ಯಪೂರ್ಣವಾದ ಸಂಭಷಣೆ, ಉತ್ತರ ಕರ್ನಾಟಕದ ಆಡುನುಡಿಯ ಸೊಗಸು ಮುಂತಾದ ಅಂಶಗಳು ನಾಟಕಕ್ಕೆ ಅಪೂರ್ವವಾದ ಶೋಭೆಯನ್ನುಂಟು ಮಾಡುತ್ತವೆ.

'ಇದಕ್ಕೆ ಸಂಶಯವಿಲ್ಲ' ಎಂಬ ನಾಟಕ ವಾಸ್ತವಿಕತೆಯನ್ನು ಸಂಶಯದ ದೃಷ್ಟಿಯಿಂದ ನೋಡುತ್ತ, ಅವಾಸ್ತವಿಕತೆಯತ್ತ ವಿಶ್ವಾಸದಿಂದ ಸಾಗುವ ಕ್ರಿಯೆ ಮೇಲೆ ನಿಂತಿದೆ. ಇಲ್ಲಿಯೂ ಸಹ ಚ,ತ,ಪ ಎಂಬ ಮೂರು ಪಾತ್ರಗಳು. 'ಪ' ವ್ಯಕ್ತಿ ಇತರರಿಗೆ ಗೊತ್ತಿಲ್ಲದ್ದು ತನಗೇ ಗೊತ್ತಿದೆಯೆಂದು ಬೀಗುವವ, ಭೂಮಿ ದುಂಡಗಿದೆ ಹೀಗಾಗಿ ಎಲ್ಲೆಲ್ಲೊ ಇರುವವರೆಲ್ಲ ಒಂದೆಡೆ ಸೇರುತ್ತಾರೆ ಎಂದು ಹೇಳುತ್ತಾ ತಲೆಯ ಮೇಲಿನ ಮುಗಿಲನ್ನು ಕದ್ದು ತನ್ನ ಜೇಬಿನಲ್ಲಿಟ್ಟುಕೊಳ್ಳುತ್ತ, ಅನೇಕ ಅಸಂಬದ್ಧ ಗುಣಗಳನ್ನು ಪ್ರದರ್ಶಿಸುತ್ತಾನೆ. ಕೆಲವೊಮ್ಮೆ 'ಪ'ನ ಮಾತುಗಳಲ್ಲಿ ಅಸಂಗತತೆಗಿಂತ ವಾಸ್ತವಿಕ ಜಗತ್ತಿನ ವಿಡಂಬನೆಯಿದೆ ಎನಿಸುತ್ತದೆ. ವಾಸ್ತವಿಕತೆಯಿಂದ ದೂರವಾಗಿ ನಿಂತು ಮನುಷ್ಯನ ಅಸ್ತಿತ್ವದ ಬಗ್ಗೆ ಯೋಚಿಸುವ ಇಲ್ಲಿನ ಪಾತ್ರಗಳ ಮನೋವ್ಯಾಪಾರವು ಅಸಂಗತತೆಯನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ. ಮನುಷ್ಯನ ಅಹಂಕಾರವನ್ನು ಮುಗಿಲಿಗೆ ಹೋಲಿಸಿ, ಆ ಮುಗಿಲನ್ನೇ ದೋಚಿಕೊಳ್ಳುವ ಅಂಶಗಳೆಲ್ಲ ಅಸಂಗತತೆಗೆ ಪುಷ್ಟಿ ನೀಡಿವೆ.

ಅದರಂತೆ 'ಅಂಟಿ ಮಿಂಟಿ ಚಾವಲ ಚಿಂಟಿ'ಯಲ್ಲಿ ಮನುಷ್ಯನ ಕೈಗೂಡದ ಆಸೆಗಳು, ಕನಸುಗಳು ತನ್ನ ವ್ಯಕ್ತಿತ್ವವನ್ನು ಅರಸುವ, ತನ್ನ ತಾನು ಗುರುತಿಸಿಕೊಳ್ಳುವ ಯತ್ನವಿದೆ. ಇಲ್ಲಿರುವ ರಾಮ–ಭೀಮ–ಶ್ಯಾಮರ ಪಾತ್ರಗಳು ತಮ್ಮದನ್ನೆಲ್ಲ ತ್ಯಜಿಸಿ, ಹೊಸದನ್ನು ಪಡೆಯುವ ತವಕವನ್ನು ಹೊಂದಿವೆ. 'ಕಾಲ'ವನ್ನು ಸೆರೆ ಹಿಡಿಯುವ, ನೆರಳಿನಂತೆ ರೂಪ ಪಡೆಯುವ ಹಂಬಲ ಇವರದು.

'ರತ್ತೋ ರತ್ತೋ ರಾಯನ ಮಳೆ' ನಾಟಕದಲ್ಲಿ ಬರುವ ಮೂರು ಪಾತ್ರಗಳು 'ಕ' 'ಕಾ' ಮತ್ತು 'ಕಿ''ಕ'–'ಕಾ'ನ ಮಧ್ಯದಲ್ಲಿ ಕನಸು–ವಾಸ್ತವಗಳ ಚರ್ಚೆ ಅಸಂಬದ್ಧ ಶೈಲಿಯಲ್ಲಿ ನಡಿದಿರುವಾಗಲೇ 'ಕಿ'ಯ ಪ್ರವೇಶ ಹಾಡಿನೊಂದಿಗೆ ಆರಂಭ

'ರತ್ತೋ ರತ್ತೋ ರಾಯನ ಮಗಳೆ
ಬಿತ್ತೊ ಬಿತ್ತೋ ಭೀಮನ ಮಗಳೆ
ಹದಿನಾರೆಮ್ಮಿ ಕಾಸಲಾರೆ, ಕಟ್ಟಲಾರೆ
ಭೈತಗುಬ್ಬಿ ಬಾಳಕಂಬ
ಕುಕ್ಕರ ಬಸವಿ ಕೂರಬಸವಿ'.

–ಶುದ್ಧ ಅಸಂಗತ ನಾಟಕಕ್ಕಿಂತ ಭಿನ್ನವಾಗಿ, ಕೆಲವೊಮ್ಮೆ ಸಾಮಾಜಿಕ, ರಾಜಕೀಯ ಅಂಶಗಳನ್ನೊಳಗೊಂಡದ್ದು ಕಂಡುಬರುತ್ತದೆ. ಶೋಷಕರ ಸ್ವಾರ್ಥದ ವಿಡಂಬನೆಯಿಂದೆ. ಹಳೇ ಮಾಲಿಕ–ಬ್ರಿಟಿಷ್, ಹೊಸ ಮಾಲೀಕ ಭಾರತೀಯ ಎಂಬ ಧ್ವನಿ ಸಂಕೇತ ಇಲ್ಲಿ ಬರುತ್ತದೆ. ನಮ್ಮವರು ಅಧಿಕಾರಕ್ಕೆ ಬಂದಾಗ ನಮಗೆ ಏನೆಲ್ಲ ಸಿಗಬಹುದೆಂಬ ಕನಸು ಕಂಡಿದ್ದ ಜನರಿಗೆ ನಿರಾಸೆಯಾದಾಗ ಮಾತುಗಳು ಸಹಜ. ಇಲ್ಲಿ ಪ್ರಾದೇಶಿಕ ಭಾಷಾ ವೈಶಿಷ್ಟತೆಗೆ ಸಾಕಷ್ಟು ಅವಕಾಶ ದೊರೆತಿದೆ ಎನ್ನಬಹುದು.

'ಮೂರು ಅಸಂಗತ ನಾಟಕಗಳು' ಎಂಬ ಕೃತಿಯಲ್ಲಿ 'ಮನೆ', 'ಆನಿಬಂತಾನಿ', 'ರೆಕ್ಕೆ'ಗಳಿವೆ. 'ಆನಿ ಬಂತಾನಿ' ನಾಟಕದ 'ಬಸವ' ಅಸಂಗತ ತತ್ವಗಳನೆಲ್ಲ ಮೈಗೂಡಿಸಿಕೊಂಡ ಪಾತ್ರ. ಯಾವುದೂ ತನ್ನದಲ್ಲ, ಎಲ್ಲವೂ ಸಾವಿನೊಂದಿಗೆ ಕೊನೆಗೊಳ್ಳುವಂಥದ್ದು, ಸಾವು ಮಾತ್ರ ಕೊನೆತನಕ ಜೊತೆಗೆ ಬರುವಂಥದ್ದು, ಎಂಬುದನ್ನು ಆಳವಾಗಿ ಚಿಂತಿಸುವ ಬಸವನು ಆನೆಗಾಗಿ ಕೊರಗುತ್ತ ಸಾವನ್ನಪುತ್ತಾನೆ.

'ಮನೆ' ನಾಟಕದಲ್ಲಿ ರಾಮಶೆಟ್ಟಿಯು ಕಟ್ಟಲಿರುವ ಮನೆಯ ಬಗೆಗೆ ಪರಮೇಶ್ವರಪ್ಪನ ಸಲಹೆ ಸೂಚನೆಗಳು, 'ದೇವರ ಮನೆ' ಕಟ್ಟಬೇಕೆಂದಾಗ ದೇವ್ರಿಗೂ ಮನೆ ಬೇಕಾ? ಇಷ್ಟು ದಿನಗಳಾದ್ದು, ಅವನು ಹುಟ್ಟಿ–ಇನ್ನೂ ಒಂದು ಮನೇನೂ ಕಟ್ಟಿಕೊಂಡಿಲ್ವಾ? ಅಯ್ಯೋ ಪಾಪ! ಅವನಿಗಾಗಿ ಮನೆ ಕಟ್ಸಿ ಕೊಡುತ್ತೀರಾ?... ಹೀಗೆ ಮುಂದುವರಿದು ರಾಜಕೀಯಕ್ಕಿಳಿದು ದಿಢೀರನೆ ಶ್ರೀಮಂತ ಕುತಂತ್ರಿಗಳ ಟೀಕೆ ಮಾಡಲು ಆರಂಭವಾಗುತ್ತದೆ.

ದೇವರಿಗೆ ಬುದ್ಧಿ ಇಲ್ಲವೆಂದು ಲೇವಡಿ ಮಾಡಿ, ಆಮೇಲೆ ದೇವರು ಭಾಳ ದೊಡ್ಡವನು ಎಂಬುದನ್ನೊಪ್ಪಿಕೊಂಡು ತಾನು, ತನ್ನಂತಿರುವ ಜನರು ಚಿಲ್ರೆ, ಎಂದು ಹೇಳಿಕೊಳ್ಳುವ ಪರಮೇಶ್ವರಪ್ಪನಲ್ಲಿ ಅಸಂಗತತೆಯಿದೆ. ಹುಚ್ಚನ ಪಾತ್ರ ಇದಕ್ಕೆ ಒತ್ತು ನೀಡಿದೆ.

'ರೆಕ್ಕೆ'ಯಲ್ಲಿ ತನ್ನ ತಾಯಿಯ ಸಡಿಲ ಚಾರಿತ್ರ್ಯದಿಂದಾಗ ಬೇಸತ್ತು ಮನೆ ಬಿಟ್ಟ ಮೇರಿ, ಪ್ರೀತಿಯಿಲ್ಲದೆ ಜೀವನಾವಶ್ಯಕ ಸಾಮಗ್ರಿಗಳನ್ನು ಮಾತ್ರ ಒದಗಿಸುವ ತಂದೆ–ತಾಯಿಗಳನ್ನು ತೊರೆದ ರಾಮಗೋಪಾ, ಹದಗೆಟ್ಟ ಕೌಟುಂಬಿಕ ಸ್ಥಿತಿಯಿಂದ ದೂರವಾಗಿರಲು ಬಂದ ಜಾನ– ಈ ಮೂರು ಪಾತ್ರಗಳು ನಿರ್ಜನ ಪ್ರದೇಶದಲ್ಲಿ ಸೇರಿದಾಗ, ಮುದುಕನ ಪರಿಚಯ ಮತ್ತು ಕತೆ ಹೇಳುತ್ತಿರುವಾಗಲೇ ಮಾಯವಾಗುವ ಮುದುಕ, ಇನ್ನಿತರ ರಮ್ಯಾದ್ಭುತ ಘಟನೆಗಳಿವೆ.

'ಹಳ್ಳಾ ಕೊಳ್ಳಾನೀರು' ನಾಟಕದ ಅ,ಬ,ಕ, ಪಾತ್ರಗಳು ತಮ್ಮಷ್ಟಕ್ಕೆ ತಾವೇ ಒಳ್ಳೆಯವರೆಂದುಕೊಳ್ಳುತ್ತ, ಇತರರನ್ನು ನಿಂದಿಸುವ ವಿಭಿನ್ನ ದೃಷ್ಟಿಕೋನವುಳ್ಳವರು. ಮನುಷ್ಯನ ವಿಶ್ವಾಸ ಘಾತುಕವೇ ಈ ನಾಟಕದ ಮುಖ್ಯ ತಿರುಳು. ಮನೋವೈಜ್ಞಾನಿಕ ನೆಲೆಯಲ್ಲಿ ಶೋಧಿಸುವಂಥ ಅಸಂಗತ ತಂತ್ರವು ಇಲ್ಲಿ ಮುಖ್ಯವಾಗಿದೆ. ಅಸಂಬದ್ಧ ಸಂಭಾಷಣೆಯ ಮೂಲಕವೇ ನಾಟಕಕಾರ ಮಾನಸಿಕ ಸ್ಥಿತಿಗಳನ್ನು ತೋರಿಸುತ್ತಾನೆ. ಬದುಕಿನಲ್ಲಿರುವ ನಿರಾಶೆ ಮತ್ತು ವಿಷಾದವನ್ನು ಮಾತುಗಳಿಂದ ಸೂಚಿಸಿದ್ದಾರೆ. ಮನುಷ್ಯ ತಾನು ಎಲ್ಲ ಕೃತ್ಯಗಳನ್ನು ಉದ್ದೇಶಪೂರ್ವಕವಾಗಿಯೇ ಮಾಡುತ್ತಾನೆಂಬುದು ಸುಳ್ಳು ಎಂಬ ಮನೋವೈಜ್ಞಾನಿಕ ಸಂಗತಿಯನ್ನು ಪಾತ್ರವೊಂದರ ಮೂಲಕ ಹೇಳಲಾಗುತ್ತದೆ.

ಮನೋಹರ ಗ್ರಂಥಮಾಲೆಯ 46ನೆಯ ಗ್ರಂಥವರ್ಷದ ದ್ವಿತೀಯ ಗ್ರಂಥವಾಗಿ ಶ್ರೀ ಚಂದ್ರಕಾಂತ ಕುಸನೂರರ 'ದಿಂಡಿ' ನಾಟಕ ಪ್ರಕಟಗೊಂಡಿತು. ಕೇವಲ ಆರು ಪಾತ್ರಗಳಿಂದ ರಚಿಸಿದ ನಾಟಕ ಸರಳ ಹಾಗು ಸಣ್ಣದ್ದಾಗಿದೆ. ಈ ಆರು ಪಾತ್ರಗಳನ್ನು ಬಿಟ್ಟರೆ ಉಳಿದೆಲ್ಲ ಪಾತ್ರಗಳ ಕೆಲಸ ಮೇಳದಲ್ಲಿದ್ದ ಕಲಾವಿದರೆ ನಿರ್ವಹಿಸಿಕೊಳ್ಳಬಹುದು.

ಮಹಾರಾಷ್ಟ್ರದ ಭಕ್ತಿ ಸಂಪ್ರದಾಯದಲ್ಲಿ 'ವಾರಕರಿ ಪಂಥ'ಕ್ಕೆ ಬಹಳ ಮಹತ್ವವಿದೆ. ಈ ಪಂಥದಲ್ಲಿ ಜಾತಿ ಮತಕ್ಕೆ ಸ್ಥಾನವಿಲ್ಲ. ದೊಡ್ಡವರು–ಸಣ್ಣವರು ಎಂಬ ಅಂತಸ್ತುಗಳಿಲ್ಲ. ಇವರು ಪಂಢರಪುರದ ಪಾಂಡುರಂಗನ ಭಕ್ತರು. ಸಾತ್ವಿಕ ಜೀವನವನ್ನು ನಡೆಸಿಕೊಂಡು ಹೋಗುತ್ತ ನಿತ್ಯ ಧ್ಯಾನ, ಮನನ ಚಿಂತನ, ಭಜನೆ, ಕೀರ್ತನೆಯಲ್ಲಿಯೇ ತಮ್ಮ ಕಾಲ ಕಳೆಯುತ್ತ "ಗ್ಯಾನ ಬಾ ತುಕಾರಾಮ, ವಿಠ್ಠಲ ರಖುಮಾಯಿ ಪಾಂಡುರಂಗ ವಿಠ್ಠಲ" ಎಂದು ಕುಣಿಯುತ್ತಾ ಹಾಡುತ್ತ ದೇವರ ದಾಸರಾಗುತ್ತಾರೆ. ಈ ಜನ ಕಾರ್ತಿಕ ಏಕಾದಶಿಗೆ ಪಂಢರಪುರದ ಯಾತ್ರೆಗೆ ಹೊರಡುತ್ತಾರೆ. ತಮ್ಮ ತಮ್ಮ ಊರು ಕೇರಿಗಳಿಂದ ತಂಡಗಳನ್ನು ಕಟ್ಟಿಕೊಂಡು, ಕೈಯಲ್ಲಿ ತಾಳ, ಕೊರಳಿಗೆ ಮೃದಂಗ ಹಾಕಿಕೊಂಡು ಹಣೆಯಲ್ಲಿ ಗಂಧಾಕ್ಷತೆ, ಕೊರಳಲ್ಲಿ ತುಳಸಿ ಮಾಲೆ, ಭುಜದ ಮೇಲೆ ಚಿಕ್ಕದೊಂದು ಕಾವಿ ಧ್ವಜ, ಕಾವಿಪಂಚೆ, ತಂಡಕ್ಕೊಂದು ಪಲ್ಲಕಿ ಅದರಲ್ಲೊಂದು ದೇವನ ಮೂರ್ತಿ. ಹೀಗೆಲ್ಲ ಸಿದ್ಧಮಾಡಿಕೊಂಡು ಪಾದಯಾತ್ರೆಯ ಮೂಲಕ ಹೊರಡುತ್ತಾರೆ. ಇವರ ಈ ಯಾತ್ರೆಗೆ 'ದಿಂಡಿ' ಎಂದು, ಇವರ ಗುರಿಯೊಂದೆ ಅದೆಂದರೆ ಪಂಢರಪುರಕ್ಕೆ ಹೋಗುವುದು. ಚಂದ್ರಭಾಗಾ ನದಿಯಲ್ಲಿ ಮಜ್ಜನ ಮಾಡುವುದು.

ಇಂಥ ಸಂದರ್ಭದಲ್ಲಿ ಮನುಷ್ಯನಿಗೆ ಅನಿವಾರ್ಯವಾಗಿ ಅಂಟಿಕೊಂಡು ಬಂದ ಸಂಸಾರದ ಲೋಭಮೋಹ ಈ ಇಲ್ಲ ವಿಷಯಗಳಿಂದ ಮುಕ್ತಿ ಪಡೆಯುವುದು ದುಸ್ತರವೆನಿಸುತ್ತದೆ. ಇಂಥ ಅಧ್ಯಾತ್ಮಿಕ ಭಕ್ತಿರಸ ಪರಿಸರದಲ್ಲಿಯೂ ಪ್ರತಿಯೊಬ್ಬರು ತಮ್ಮ ವ್ಯಕ್ತಿಗತ ಕಾಳಜಿಗಳಿಂದ, ಚಿಂತೆ, ಸುಖ, ದುಃಖ, ನೋವು–ನರಳಾಟ ಸಂಕಟಗಳಿಂದ, ಸ್ವಕೀಯ ಪರಕೀಯ ಭಾವಗಳಿಂದ ಆವರಿಸಲ್ಪಟ್ಟಿರುತ್ತಾರೆ.

ಇಂಥ ದಿಂಡಿಯಾತ್ರಾರ್ಥಿಗಳು ತಮ್ಮ ತಮ್ಮ ಬಿಡುವಿನ ಸಮಯದಲ್ಲಿ ಹೆಣ್ಣುಗಂಡಿನ ಮಾತು, ಸಾಮಾಜಿಕ ಮಾತು, ರಾಜಕೀಯ ಹರಟೆ, ಬಡವ–ಬಲ್ಲಿದರ ಮಾತು, ಹತ್ತು–ಹಲವಾರು ವಿಷಯಗಳಿಗೆ ಕುರಿತಂತೆ ಹರಟೆ ಹೊಡೆಯುತ್ತಾರೆ. ಇದನ್ನೆಲ್ಲ ಗಮನಿಸಿದ ಲೇಖಕರು ಒಂದು ಸಂದರ್ಭವನ್ನು ಹೆಣೆದು ಈ 'ದಿಂಡಿ' ನಾಟಕವನ್ನು ಸೃಷ್ಟಿಸಿರುವರು. ಇದೊಂದು ಮನೋರಂಜನಾತ್ಮಕ ನಾಟಕ, ಹಾಸ್ಯರಸವನ್ನೇ ಮುಖ್ಯವಾಗಿಟ್ಟು ಕೊಂಡು ಹೆಣೆಯಲಾಗಿದೆ. ಒಂದು ಮನೆಯಲ್ಲಿ ಸಾವು ಸಂಭವಿಸಿ ನಡು ಮನೆಯಲ್ಲಿ ಶವ ಬಿದ್ದಿದ್ದರೂ, ಆ ಮನೆಯ ಸದಸ್ಯರ ವರ್ತನೆ, ಆ ಶವದ ಸ್ನೇಹಿತರು ಇನ್ನಿತರರ ವರ್ತನೆಗಳ ಬಗ್ಗೆ ಬಹಳ ತೀಕ್ಷ್ಣವಾಗಿ ಬಿಂಬಿಸಲಾಗಿದೆ. ವಿನಾಯಕರಾವರ ಶವವನ್ನು ನೋಡಲು ಬಂದವರು ಅವರು ಮಾತಾಡಿಕೊಳ್ಳುವ ರೀತಿ, ಅವರ ವಿಚಾರ–ಹೀಗೆ ಇಂಥವುಗಳನ್ನೆಲ್ಲ, ಮನುಷ್ಯ ಸ್ವಭಾವದ ಸೂಕ್ಷ್ಮತೆಗಳನ್ನು ಇದು ಚಿತ್ರಿಸುತ್ತದೆ.

ಬೇರೆ ಬೇರೆ ಕಡೆಯಿಂದ ಸಂಬಂಧಿಕರು ಬರುವವರೆಗೆ ಶವವನ್ನು ಇಟ್ಟುಕೊಂಡಿರಬೇಕು. ಆಗ ಭಜನೆ ಮೇಳದವರನ್ನು ಕರೆಯಿಸಿದಾಗ, ಅವರು ಬಂದು 'ಭಜಗೋವಿಂದಂ' ಎಂದು ಭಜನೆ ಆರಂಭಿಸುತ್ತಾರೆ. ಅವರುಗಳು ಮಾಡುವ ಭಜನೆ, ಸಂಗೀತ, ತಾಳ–ಮೇಳ ಎಲ್ಲ ಅಸ್ಪಷ್ಟ. ಅರ್ಥಕ್ಕೆ ಅಪಾರ್ಥ ಬರುವಂತೆ ಹೇಗೋ ಹಾಡಿ ಮುಗಿಸಿ ಹಣ ಕೀಳಲು ಶುರುಮಾಡಿಬಿಡುತ್ತಾರೆ. ಒಂದು ಓಣಿಯ ಮನೆಯೊಂದರಲ್ಲಿ ಸತ್ತು ಬಿದ್ದ ಶವ ಸಾರ್ವಜನಿಕ ಸೊತ್ತಾಗಿ ಬಿಡುವ ಬಗ್ಗೆ, ಅಲ್ಲದೇ ಶವಕ್ಕೆ ಸದ್ಗತಿ ಒದಗಿಸಬೇಕಾದ ಗಂಡು ಸಂತಾನದ ನಿರ್ಲಕ್ಷ, ಬೇಜವಾಬ್ದಾರಿತನವನ್ನು ಬಹಳ ನಿಷ್ಠುರವಾಗಿ ನಿರೂಪಿಸಲಾಗಿದೆ. ಶಾಸ್ತ್ರೋಕ್ತವಾಗಿ ಅಂತ್ಯಕ್ರಿಯೆ ಬೇಡ ಹಣ ತುಂಬಾ ಖರ್ಚಾಗುತ್ತದೆ ಎಂದು ಮುನಿಸಿಪಾಲಿಟಿಯ ಶವ ವಾಹಕಕ್ಕಾಗಿ ಪರದಾಡುವ ಮಗ, ಅಲ್ಲಿಗೆ ಬಂದವರೆಲ್ಲ ತಮ್ಮ ತಮ್ಮ ವ್ಯಕ್ತಿ ವಿಚಾರಗಳನ್ನು ಮಾತಾಡುತ್ತ, ಹರಟೆ ಹೊಡೆಯುತ್ತಾ ಕಾಲ ಕಳೆಯುವ–ಹೀಗೆ ಯಾರಿಗೂ ಶವದ ಬಗ್ಗೆ ಚಿಂತೆ ಅದಕ್ಕೆ ಮುಕ್ತಿ ಒದಗಿಸುವುದರ ಬಗ್ಗೆ ಗಮನವೇ ಇರುವುದಿಲ್ಲ. ಒಟ್ಟಾರೆಯಾಗಿ ಒಂದು ಲಲಿತಪ್ರಬಂಧ ಅಥವಾ ಹರಟೆಯ ಪ್ರಕಾರದಂತಿರುವ ಈ ನಾಟಕ ವಾಸ್ತವತೆಯ ಕಟುಸತ್ಯವನ್ನು ಸಾರಿ ಹೇಳುತ್ತದೆ.

ಮೇಳ, ಸೂತ್ರಧಾರ, ಸ್ಮಶಾನ ಕಾವಲುಗಾರ–ಹೀಗೆ ಇಂಥ ಪಾತ್ರಗಳಿಂದ ಬದುಕಿನ ಸತ್ಯವನ್ನು ಬಯಲು ಮಾಡುತ್ತಾರೆ ಲೇಖಕರು. ಮಧ್ಯಮವರ್ಗದ ಸಂಪ್ರದಾಯಸ್ಥ ವ್ಯಕ್ತಿಯೊಬ್ಬನ ಸಾವು ಮತ್ತು ಅದರ ಮುಕ್ತಿ ಎಷ್ಟೊಂದು ಭಯಂಕರ ಎಂಬುದು ವ್ಯಕ್ತವಾಗುತ್ತದೆ. ವಯಸ್ಸಾದ ತಂದೆ–ತಾಯಿಗಳು ಮಕ್ಕಳಿಗೆ ಅದೆಷ್ಟು ಭಾರವಾಗಿ ಬಿಡುತ್ತಾರೆ, ಶವದ ಅಂತ್ಯಕ್ರಿಯೆಗೂ ಆ ಸಂತಾನ ಗಮನ ಹರಿಸದೆ ಎಷ್ಟೊಂದು ತಾತ್ಸಾರ ತೋರಿಸುತ್ತದೆ ಎಂಬುದು

ಸೂಚ್ಯವಾಗಿದೆ. ಇಡೀ ನಾಟಕದ ತುಂಬ ವೈರಾಗ್ಯ-ವಿಡಂಬನೆಯ ಮಾತುಗಳಿದ್ದರೂ, ಅವು ಕೇವಲ ತಮಾಷೆ-ನಗುವನ್ನು ಮಾತ್ರ ಒಳಗೊಂಡಿರದೆ, ಅದರ ಹಿಂದೆ ಅಡಗಿರುವ ಧ್ವನಿಯು ಬಹಳ ಪ್ರಧಾನವೆನಿಸುತ್ತದೆ.

'ದಿಂಡಿ' ನಾಟಕ ಅಸಂಗತ ನಾಟಕವಲ್ಲದಿದ್ದರೂ ಅಸಂಗತ ಛಾಯೆಯುಳ್ಳ ನಾಟಕವಾಗಿದೆ. ವಿನಾಯಕರಾಯರ ಆತ್ಮವು ಗಣಪತಿರಾಯರ ಆತ್ಮದೊಂದಿಗೆ ಜೋಡಿಯಾಗಿ ಮುಂದಿನ ಯಾತ್ರೆಗೆ ಹೊರಡುವುದು. ಇಹಲೋಕದ ಯಾತ್ರೆ ಮುಗಿದರೂ ಮತ್ತೆ ಪಯಣ ಕೈಗೊಂಡ ಇಬ್ಬರಿಗೂ ತಮ್ಮ ಗುರಿಯ ಅರಿವಿಲ್ಲ. ಅದಕ್ಕೆ ವಿನಾಯಕರಾಯರು "ಹಿಂಗೇ ನಡ್ಕೋತು ಹೊಂಟ್ತಾಯ್ತು, ಒಂದಿಲ್ಲಾ ಒಂದಿನ ಗಂತವ್ಯ ಸಿಕ್ಕೇ ಸಿಗ್ತದ. ಪಂಢರಪುರಕ ಹೋಗೋ ವಾಕರಿಗಳ ದಿಂಡಿ ಯಾತ್ರಾದಂತೆ ನಮ್ಮ ಜೀವನ ಹೋಗಬೇಕು, ಬರಬೇಕು...ಮತ್ತೆ ಹೋಗಬೇಕು" ಎನ್ನುತಾರೆ, ಗುಂಡಭಟ್ಟ, ವಸಂತರಾವ, ರಾಧಾ, ಗಂಗಾಬಾಯಿ, ಮೇಳದವರು, ಸೂತ್ರಧಾರ ಈ ಎಲ್ಲರ ಸಂಭಾಷಣೆಯು ಒಂದಕ್ಕೊಂದು ಸಂಬಂಧವಿಲ್ಲದಂತೆ ಅಸಂಬದ್ಧ ಎನಿಸಿದರೂ ಅರ್ಥಗರ್ಭಿತವಾಗಿದೆ. ಜೀವನ ಮೃತ್ಯುವಿನ ಬಗೆಗೆ ಆಳವಾದ ಚಿಂತನೆಯಿದೆ.

"ಜೀವನದಲ್ಲಿ ನೋವು, ನಿರಾಸೆ, ಸಾವಿನತ್ತ ಪಯಣ ಹಾಗೂ ಸಾವು ಇವು ಕುಸನೂರರ ಹಲವು ನಾಟಕಗಳ ಮೂಲಸೂತ್ರ, ಚಿಂತನೆಯ ದೃಷ್ಟಿಯಿಂದ ಅವರ ನಾಟಕಗಳು ಅಸಂಗತ ಪ್ರಣಾಲಿಗೆ ಹತ್ತಿರವಾಗಿದ್ದರೂ ತಂತ್ರ, ಸಂಭಾಷಣೆ ಮತ್ತು ಕತೆಯ ದೃಷ್ಟಿಯಿಂದ ಸಾಂಪ್ರದಾಯಿಕ ಶೈಲಿಯನ್ನು ಅಲ್ಲಲ್ಲಿ ಒಳಗೊಳ್ಳುತ್ತವೆ" ಎಂಬ ವಿದ್ವಾಂಸರ ಅಭಿಪ್ರಾಯ ಸಮಂಜಸವಾಗಿದೆ.

ಅಸಂಗತ ನಾಟಕಗಳಿಗೆ ಅವಶ್ಯವಾದ ಎಲ್ಲ ಅನುಭವ ಸಾಮಗ್ರಿ ಇವರ ಈ ನಾಟಕದಲ್ಲಿದೆ. ವ್ಯಕ್ತಿತ್ವದ ಹುರುಳಿಲ್ಲದ ಅನ್ವೇಷಣೆ, ವೈಯಕ್ತಿಕ ಸಂಬಂಧಗಳ ವಿಚ್ಛೇದ, ಬದುಕಿನ ನಿರರ್ಥಕತೆ, ಈ ಮೊದಲಾದ ವಸ್ತುಗಳು ಕೃತಿಗಳಲ್ಲಿ ತುಂಬಿವೆ. ಇವನ್ನೆಲ್ಲ ಅಭಿವ್ಯಕ್ತಿಸಲು ಅಸಾಧಾರಣವಾದ ರೂಪಕ, ಪ್ರತಿಮೆಗಳನ್ನು ಬಳಸಿಕೊಳ್ಳುತ್ತಾರೆ. ಬೆಳಕಿನ ಅಭಿಷೇಕ ಮಾಡಿಸಿಕೊಂಡು ತಾನು ಮಹಾರಾಜನೆಂದು ಮೆರೆಯುವ ಹುಚ್ಚ, ಸತ್ತು ಹೋಗಿದ್ದರೂ ಹೊಗೆಯ ಆಕಾರದಲ್ಲಿ ಇದ್ದವರೊಡನೆ ಮಾತಾಡುವ ಮುದುಕ, ಕಲ್ಪನಾರಮ್ಯವಾದ ಮಕ್ಕಳ ಹಾಡು, ಕತೆಗಳು, ಇಂಥ ರೂಪಕಗಳ ಮೂಲಕವಾಗಿ ಕುಸನೂರರು ಅಮೂರ್ತವಾದದ್ದನ್ನು ಮೂರ್ತವಾಗಿಸಲು ಯತ್ನಿಸುತ್ತಾರೆ. "ಪರಂಪರೆ ದೇವರು ಮತ್ತು ನೈತಿಕ ಮೌಲ್ಯಗಳಲ್ಲಿ ನಂಬಿಕೆ ಕಳೆದುಕೊಂಡ ವ್ಯಕ್ತಿ, ಮುಪ್ಪು, ಸಾವಿನ ಘೋರ ಸತ್ಯದೆದುರು ಒಂಟಿಯಾಗಿರುವ ದುರಂತವನ್ನು ಇವರ ಎಲ್ಲ ಅಸಂಗತ ನಾಟಕಗಳಲ್ಲಿ ಕಾಣಲಾಗಿದೆ" ಎಂಬ ವಿದ್ವಾಂಸರ ಮಾಡು ಸತ್ಯ ವಿದಿತ.

ಶ್ರೀ ಚಂದ್ರಕಾಂತ ಕುಸನೂರ ಅವರ ಚಿಕ್ಕ ನಾಟಕ 'ಸುರೇಖಾ ಮ್ಯಾಡಂ'. ಸ್ವತಃ ಲೇಖಕರೆ ಹೇಳಿದಂತೆ ಇದೊಂದು ಹೊಸದಾದ ಪ್ರಯೋಗ. ಕಿರುಪರದೆಯ ಮೇಲೆ ಪ್ರಯೋಗ ಮಾಡುವುದಕ್ಕಾಗಿಯೇ ರಚಿಸಿರುವಂತಿದೆ. ಆಧುನಿದ ಕಾಲದ ಬಬ್ಬ ವಿದ್ಯಾವಂತ ಸ್ತ್ರೀಯ ಬದುಕನ್ನು ನಾನಾ ಆಯಾಮಗಳಲ್ಲಿ ಚಿತ್ರಸಲಾಗಿದೆ. ಆಧುನಿಕ ವಿವಾಹಿತ ಸ್ತ್ರೀಯ ಜೀವನದ ಹಿಂದಿನ-ಸದ್ಯದ-ಮತ್ತು ಮುಂದಿನ ಜೀವನದ ಹಲವಾರು ವಿಚಾರಗಳನ್ನು ಬಿಚ್ಚಿಡುತ್ತ ಅವಳ ಮಾನಸಿಕ ಸ್ಥಿತಿಯ ತೊಳಲಾಟಗಳನ್ನು ನಿರೂಪಿಸಲಾಗಿದೆ. ಈ ಪುಟ್ಟ ನಾಟಕದಲ್ಲಿ ಒಂದೊಂದು ಪಾತ್ರದ ಸಂಭಾಷಣೆ ಸುದೀರ್ಘವಾಗಿದ್ದು, ತಮ್ಮಷ್ಟಕ್ಕೆ ತಾವೇ ಮಾತಾಡಿಕೊಳ್ಳುತ್ತ ಹೋಗುತ್ತವೆ. ಏಕನಾಥ ಸೇವಕನೊಬ್ಬನ ಹೆಸರು. ಈತ ತನ್ನ ಯಜಮಾನಿಯಾದ 'ಸುರೇಖಾ ಮ್ಯಾಡಂ'ಗೆ ನೀಡುವ ಸಮಾಧಾನ-ಪರಿಹಾರದ ಮಾತುಗಳು ಅಚ್ಚರಿ ಮೂಡಿಸುತ್ತವೆ. ಸುರೇಖಾಳ ಮನಸ್ಥಿತಿಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡ ಈತ ಅವಳಿಗೆ ಹಿತೈಷಿ, ಸ್ನೇಹಿತ, ಸಹೋದರ ಹೀಗೆ ಎಲ್ಲವೂ ಆಗಿರುತ್ತಾನೆ.

ಸುರೇಖಾಳ ಜೀವನದಲ್ಲಿ ಸಂಜಯ, ಕಿಶನ್ ಮತ್ತು ಸಬನಿಸ್ ಎಂಬ ಆಗರ್ಭ ಶ್ರೀಮಂತ-ಮೂರು ವ್ಯಕ್ತಿಗಳು ಬರುತ್ತಾರೆ. ಮಾಜಿ ಪ್ರೇಮಿಗಳಾದ ಸಂಜಯ, ಕಿಶನ್‌ರಿಂದ ಮೋಸಗೊಂಡು ಸುರೇಖಾ ಅತ್ಯಂತ ಶೀಮಂತನಾದ ಕಿಶನ್‌ನೊಂದಿಗೆ ವೈವಾಹಿಕ ಜೀವನದಲ್ಲಿ ಕಾಲಿಟ್ಟ ಮೇಲೆಯೂ ಪದೇ ಪದೇ ಗಂಡನಿಂದ ಶೋಷಿತಳಾಗುತ್ತಾಳೆ. ಬೃಹತ್ ಉದ್ಯಮಿಯಾದ ಸಬನಿಸನಿಗೆ ಮನೆ-ಕುಟುಂಬ. ಹೆಂಡತಿ ಅಂದರೆ ಅಷ್ಟಕಷ್ಟೆ. ತಿಂಗಳಿಗೊಮ್ಮೆ ಮಾತ್ರ ಒಂದೆರಡು ದಿನ ಮನೆಗೆ ಹಿಂತಿರುಗುವ ಈತ ಅಲೆಮಾರಿ. ಉದ್ಯಮದ ನಿಮಿತ್ತ ಊರೂರು ಅಲೆಯುತ್ತ ಹೆಂಡತಿಗೆ ಸಮಯವೇ ಕೊಡುತ್ತಿರಲಿಲ್ಲ.

ಮನೆಯಲ್ಲಿದ್ದಾಗ ಮಾತ್ರ ವಿನಾಕಾರಣ ಸುರೇಖಾಳನ್ನು ಅವಾಚ್ಯ ಶಬ್ದಗಳಿಂದ ನಿಂದನೆ ಮಾಡುವುದು, ಅವಮಾನ ಪಡಿಸುವುದು, ಹೆಂಡತಿ ಎಂಬ ಪ್ರೀತಿ ಕಾಳಜಿ ಅವನಿಗೆ ಇರುತ್ತಲೇ ಇರಲಿಲ್ಲ. ಹೊರಹೊರಗೆ ಟೂರು ಟ್ರಿಪ್ಪು ಎಂದು ತಿರುಗುತ್ತ ಬೇರೆ ಬೇರೆ ಹೆಣ್ಣುಗಳ ಸಹವಾಸ ಮತ್ತು ಕುಡಿತಕ್ಕೆ ದಾಸ್ಯನಾಗುತ್ತಾನೆ. ತನ್ನ ಹೆಂಡತಿಯೊಬ್ಬಳು ಮನೆಯಲ್ಲಿರುವಳು ಎಂಬುದರ ವಿಚಾರವೇ ಆತನಿಗಿರದು. ಈತನ ವರ್ತನಕ್ಕೆ ರೋಸಿ ಹೋದ ಸುರೇಖಾ ಮಾನಸಿಕವಾಗಿ ಬಹಳಷ್ಟು ದುಃಖಿತಳಾಗುತ್ತಾಳೆ.

ದಿನ ದಿನವೂ ಅವಳಿಗೆ ಸಂಸಾರ ಭಾರವಾಗುತ್ತ, ಪಾರ್ಟಿ ಫ್ರೆಂಡ್ಸ್, ಫಂಕ್ಷನ್ನಗಳಿಗೆ ತನ್ನ ಜೀವನವನ್ನು ಸೀಮಿತಗೊಳಿಸಿಕೊಳ್ಳತೊಡಗುತ್ತಾಳೆ. ಈ ದಂಪತಿಗಳೀರ್ವರ ಬದುಕನ್ನು ಗಮನಿಸುತ್ತಿದ್ದ ಮನೆಯ ಸದಸ್ಯನಂತಿರುವ ಸೇವಕ ಏಕನಾಥನಿಗೆ ವಿಚಿತ್ರವೆನಿಸುತ್ತದೆ. ಆತನಿಗೆ ತನ್ನ ಮಾಲೀಕರ ಮೇಲೆ ಕಾಳಜಿ ಅಭಿಮಾನ, ಗಂಡ-ಹೆಂಡಿರ ಬದುಕನ್ನು ಸರಿದೂಗಿಸಬೇಕೆಂಬ ಹುನ್ನಾರು. ಆದರೆ ದಿನದಿಂದ ದಿನಕ್ಕೆ ಇವರ ಮಧ್ಯೆ ಕಂದಕ ಹೆಚ್ಚಾಗುತ್ತ ಹೋಗುತ್ತದೆ.

ಒಡೆಯನಿಲ್ಲದ ಮನೆಯಲ್ಲಿ ಮನೆಯ ಎಲ್ಲ ಜವಾಬ್ದಾರಿ ಈ ಏಕನಾಥನೇ ನಿಭಾಯಿಸುವುದು. ದಿನಾಲು ಬರುವ ಫೋನ್ ಕಾಲನ್ನು ರಿಸೀವ್ ಮಾಡಿ ಮಾಡಿ ಸಾಕಾಗಿ ಹೋಗುತ್ತಿತ್ತು. ಇಂಥ ಬಿರುಕು ಬಿಟ್ಟ ಕುಟುಂಬದ ಮಧ್ಯೆ ಏಕನಾಥ ಹಾಗು ಸುರೇಖಾಳ ನಡುವೆ ಆತ್ಮೀಯ ಸ್ನೇಹ ಸಂಬಂಧ ಏರ್ಪಡುತ್ತದೆ. ಅವನಿಗೆ ತನ್ನೊಡತಿಯ ನೋವು ಸಂಕಟವನ್ನು ಕಂಡು ಮನಕರಗುತ್ತದೆ. ಸುರೇಖಾಳಿಗೂ ಅಷ್ಟೆ ಯಾರಿಗೂ ಹೇಳದೆ ಇರುವ ವಿಷಯಗಳನ್ನು ಅವನೆದುರು ಹೇಳಿಕೊಂಡು ಅತ್ತು ಸಮಾಧಾನಗೊಳ್ಳುತ್ತಾಳೆ. ಏಕನಾಥನ ಪಾತ್ರ ಇಡೀ ನಾಟಕಕ್ಕೆ ಸೂತ್ರ. ಅವನ ಬಾಯಿಂದಲೇ ಲೇಖಕರು ಬದುಕಿನ ಅರ್ಥವನ್ನು ತೆರೆದು ತೋರಿಸುತ್ತಾರೆ. ಆದರೆ ಒಮ್ಮೊಮ್ಮೆ ಇದು ಅತಿರೇಕವೆನಿಸುತ್ತದೆ. ಏಕನಾಥ ಮತ್ತು ಸುರೇಖಾಳ ಸಂಬಂಧ ಯಾವುದೇ ಹೆಸರಿಲ್ಲದ ಸಂಬಂಧ. ಪ್ರತಿ ಸಂದರ್ಭದಲ್ಲಿ ಅವರಿಬ್ಬರ ಸಂಪರ್ಕ ಅನ್ಯೋನ್ಯ. ಅವನು ಹೇಳುವ ಮಾತುಗಳನ್ನು ಆಸಕ್ತಿಯಿಂದ ಆಲಿಸುತ್ತಿದ್ದ ಮ್ಯಾಡಂ ಸುರೇಖಾ ಅದನ್ನು ಪಾಲಿಸುತ್ತಾಳೆಯೂ ಕೂಡ.

ಬಡವನಾದ ಏಕನಾಥ ಕೆಲವೊಮ್ಮೆ ತನ್ನೊಡತಿಗೆ ತನ್ನ ಗುಡಿಸಲಿಗೆ ಆಹ್ವಾನಿಸುತ್ತಾನೆ. ಇವಳು ಸಹ ಕರೆದುಕೊಂಡು ಹೋಗು ಎಂದು ಕೇಳುವ ರೀತಿ, ಆದರೆ ಇಬ್ಬರ ಮಧ್ಯೆ ಪವಿತ್ರವಾದ ಬಾಂಧವ್ಯ ಸ್ನೇಹಕ್ಕಿಂತ ಎರಡು ಹೆಜ್ಜೆ ಮುಂದೆ ಪ್ರೀತಿಗಿಂಥ ಎರಡು ಹೆಜ್ಜೆ ಹಿಂದೆ ಎನ್ನುವಂತಿರುತ್ತದೆ. ಏಕಾಥ ಬಡವನಾದರೂ ಹೆಂಡತಿ ಕಮಲಿ ಮತ್ತು ಅವ್ವನೊಂದಿಗೆ ನೆಮ್ಮದಿಯ ಬದುಕು ಸಾಗಿಸುತ್ತಿರುತ್ತಾನೆ. ಪ್ರೀತಿಗೆ ಬಡತನ-ಸಿರಿತನದ ಮಾತೆಲ್ಲಿ. ಸುರೇಖಾಗೆ ಅವನ ಕುಟುಂಬ ಒಂದು ಆದರ್ಶದಂತೆ ಗೋಚರಿಸುತ್ತದೆ.

ದಿನದಿನವೂ ಸತ್ತು ಬದುಕುತ್ತಿದ್ದ ಸುರೇಖಾ ಅಂತಿಮವಾಗಿ ಒಂದು ನಿರ್ಧಾರಕ್ಕೆ ಬರುವಳು, ಇಂಥ ಗಂಡನಿಂದ ದೂರಾಗಿ ಅವನ ಮನೆ ಬಿಟ್ಟು, ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಬಾಳಲು ನಿರ್ಣಯ ತೆಗೆದುಕೊಳ್ಳುವಳು. ಇದಕ್ಕೆ ಮೆಚ್ಚುಗೆ ಸೂಚಿಸಿದ ಏಕನಾಥ ಅವಳು ಹೇಳಿದ ಹಾಗೆ ಬಾಡಿಗೆ ಮನೆಯೊಂದನ್ನು ಹುಡುಕುತ್ತಿರುತ್ತಾನೆ. ಹೀಗಿರುವಾಗ ಒಂದು ರಾತ್ರಿ ಇದ್ದಕ್ಕಿದ್ದ ಹಾಗೇ ಫೋನ್ ಕರೆ ಬಂದು, 'ಸಬನಿಸ್ ಅವರು ರಾತ್ರಿ ಭೀಕರ ರಸ್ತೆ ಅಪಘಾತಕ್ಕೀಡಾದರು ಎಂಬ ಸುದ್ದಿ ತಿಳಿದುಬರುತ್ತದೆ. ಈ ಸುದ್ದಿಯಿಂದ ಹುಚ್ಚಳಂತಾದ ಸುರೇಖಾ ಕುಸಿಯುತ್ತಾಳೆ.

ಈ ನಾಟಕದಲ್ಲಿ ಸ್ತ್ರೀಪರ ಭಾವನೆಗಳು ಅಲ್ಲಲ್ಲಿ ವ್ಯಕ್ತಗೊಂಡಿವೆ. ನಾಯಕಿ ಸುರೇಖಾ ಅನುಭವಿಸುವ ಅವಮಾನ, ನೋವು ಸಂಕಟಕ್ಕೆ ಪುರುಷನೇ ಕಾರಣ. ಆದರೆ ಅದೇ ಇನ್ನೊಬ್ಬ ಪುರುಷ ಏಕನಾಥನಿಂದಲೇ ಅವಳ ಮನಕ್ಕೆ ಶಾಂತಿ–ನೆಮ್ಮದಿ ದೊರಕುತ್ತದೆ. ಅವನು ನಡೆಸುವ ಜೀವನ, ಅಲ್ಲದೇ ತನ್ನ ಗಂಡ ಸಬನಿಸ್ ನಡೆಸುವ ಬದುಕು ಎಷ್ಟೊಂದು ಭಿನ್ನ ಎಂದೆನಿಸುತ್ತದೆ ಅವಳಿಗೆ. ಬಡವನಾದ ಅಷ್ಟೊಂದು ಶಿಕ್ಷಣ ಪಡೆಯದ ಏಕನಾಥನಿಗಿರುವ ತಿಳಿವಳಿಕೆ ಜವಾಬ್ದಾರಿ, ಇನ್ನೊಬ್ಬರ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ವಿಚಾರ, ಎಲ್ಲವೂ ಅದ್ಭುತವಾಗಿರುತ್ತದೆ. ಏಕನಾಥ ಮತ್ತು ಸುರೇಖಾಳ ಮಧ್ಯವಿರುವ ಆತ್ಮೀಯ ಸಂಬಂಧ ಚೆನ್ನಾಗಿ ಚಿತ್ರಿಸಲಾಗಿದೆ. ನಾಟಕದ ಕೊರತೆಯಂತೆ ಕಂಡುಬರುವ ಅಂಶಗಳೆಂದರೆ, ಬಹಳ ಸುದೀರ್ಘವಾದ ಒಂದೇ ಪಾತ್ರದ ಮಾತುಗಳು, ಏಕನಾಥನಿಗಿರುವ ಎಲ್ಲ ವಿಷಯಗಳ ತಿಳಿವಳಿಕೆ, ಅಧ್ಯಾತ್ಮ ಉಪದೇಶ. ಇಂಥ ಅಸಾಮಾನ್ಯದ ಬಗ್ಗೆಯೂ ಆತ ಮಾತನಾಡುತ್ತಿರುವುದು ಸ್ವಲ್ಪ ಅತಿರೇಕವೆನಿಸದಿರದು. ಒಂದು ಅತ್ಯಂತ ಸರಳ–ಸಣ್ಣ ಸಂಗತಿಯನ್ನು ಆಯ್ಕೆ ಮಾಡಿಕೊಂಡು ಬಹಳ ಗಡಿಬಿಡಿಯಿಂದ ಬಲವಂತವಾಗಿ ನಾಟಕ ರಚಿಸಿದಂತಿದೆ. ಒಟ್ಟಾರೆ ಇದೊಂದು ಸಾಮಾಜಿಕ ನಾಟಕ.

ಆಧುನಿಕ ಕನ್ನಡ ಸಾಹಿತ್ಯದ ಘಟ್ಟಗಳಾದ ನವ್ಯ ಪರಂಪರೆಯಲ್ಲಿ ಅಸಂಗತ ನಾಟಕಗಳ ಜೀವ ಹೊಸ ಅಲೆಯ ನಾಟಕಗಳ ಪ್ರದರ್ಶನಕ್ಕಾಗಿ 'ರಂಗಮಾಧ್ಯಮ' ಹವ್ಯಾಸಿ ಸಂಸ್ಥೆಯನ್ನು ಆರಂಭಿಸಿದ ಕೀರ್ತಿ ಕುಸನೂರರಿಗೆ ಸಂದಿದೆ. ಹೀಗೆ ನಾಟಕಗಳ ನಿರ್ದೇಶಕರಾಗಿ, ನಾಟಕಗಳ ಹಾಡುಗಳಿಗೆ ಲಯ, ದಾಟಿಗಳನ್ನು ನೀಡುತ್ತ ಕಲಾವಿದರಿಗೆ ತರಬೇತಿ ನೀಡಿದವರು ಇವರು.

## ಗ್ರಂಥ ಸೂಚಿ


೧. ಡಾ.ಕಾವ್ಯಶ್ರೀ ಜಿ., ಚಂದ್ರಕಾಂತ ಕುಸನೂರು, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಕಲಬುರಗಿ,
೨. ಚಂದ್ರಕಾಂತ ಕುಸನೂರು., ಕಲೆ, ಅನುಭವ ಮತ್ತು ಅನುಭಾವ ಲೇಖನ
೩. ಚಂದ್ರಕಾಂತ ಕುಸನೂರು., ದಿಂಡಿ,
೪. ಚಂದ್ರಕಾಂತ ಕುಸನೂರು, ರೇಶಂ ಕಿ ಗುಡಿಯಾ
೫. ಚಂದದ್ರಕಾಂತ ಕುಸನೂರು., ವಿದೂಷಕ
೬. ಸಂಕ್ರಮಣ, ದ್ವೈಮಾಸಿಕ